# ಪ್ರಾರ್ಥನೆ

ಪ್ರಾರ್ಥನೆ ಮಾಡಲು ಯೇಸುವಿನ ಆಜ್ಞೆಯನ್ನು ಕಲಿಸಲು ಈ ಕೆಳಗಿನವು ಒಂದು ರೂಪುರೇಖೆಯಾಗಿದೆ.

## ಭಾಗ ಒಂದು
## ಹಿಂತಿರುಗಿ ನೋಡುವುದು

### ಪ್ರಾರ್ಥನೆ

ಪ್ರಾರ್ಥನೆಯಲ್ಲಿ ಒಟ್ಟಿಗೆ ಆರಂಭಿಸಿ.

# ಹೊಣೆಗಾರಿಕೆ

ಮಾಡಿದ ಬದ್ಧತೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ. ಉದಾಹರಣೆಗೆ, ಹೀಗೆ ಕೇಳಿರಿ:

- ನೀವು ಕೊನೆಯ ಬಾರಿಗೆ ಕಥೆಯನ್ನು ಯಾರೊಂದಿಗಾದರು ಹಂಚಿಕೊಂಡಿದ್ದೀರಾ?
- ನೀವು ಪ್ರತಿದಿನ ಸತ್ಯವೇದವನ್ನು ಓದಿದ್ದೀರಾ ಅಥವಾ ಕೇಳಿದ್ದೀರಾ?
- ದೇವರು ನಿಮಗೆ ಕಲಿಸಿದ್ದನ್ನು ನೀವು ಹೇಗೆ ಪಾಲಿಸಿದ್ದೀರಿ?
- ನೀವು ಹಂಚಿಕೊಳ್ಳಲು ಬಯಸುವ ಯಾವುದೇ ಪ್ರಾರ್ಥನೆ ವಿನಂತಿಗಳು ಅಥವಾ ಕಥೆಗಳು ಇದೆಯೇ?

# ಭಾಗ ಎರಡು
# ಮೇಲಕ್ಕೆ ನೋಡುವುದು

## ಅಧ್ಯಯನ

ಒಟ್ಟಿಗೆ ಸತ್ಯವೇದದ ಅಧ್ಯಯನ ಮಾಡುವುದರ ಮೂಲಕ ಪ್ರಾರ್ಥನೆ ಮಾಡುವ ಯೇಸುವಿನ ಆಜ್ಞೆಯ ಬಗ್ಗೆ ಕಲಿಸಿ. ಯೇಸು ಆಜ್ಞೆಯನ್ನು ನೀಡಿದ ಸಮಯವನ್ನು ಮೊದಲು ಓದಿ ಮತ್ತು ನಿಜವಾದ ಕಥೆಯನ್ನು ಚರ್ಚಿಸಿ ಅದು ವಿಧೇಯತೆ ಹೇಗಿರಬಹುದು ಎಂಬುದನ್ನು ವಿವರಿಸುತ್ತದೆ.

ಲೂಕ 18:1–8:

> ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬದಕ್ಕೆ ಆತನು ಅವರಿಗೆ ಒಂದು

ಸಾಮ್ಯವನ್ನು ಹೇಳಿದನು. ಅದೇನಂದರೆ – ಒಂದಾನೊಂದು ಊರಿನಲ್ಲಿ ಒಬ್ಬ ನ್ಯಾಯಾಧಿಪತಿ ಇದ್ದನು; ಅವನು ದೇವರಿಗೆ ಹೆದರದೆ ಮನುಷ್ಯರನ್ನು ಲಕ್ಷ್ಯಮಾಡದೆ ಇದ್ದವನು. ಅದೇ ಊರಿನಲ್ಲಿ ಒಬ್ಬ ವಿಧವೆ ಇದ್ದಳು. ಆಕೆಯು ಅವನ ಬಳಿಗೆ ಬಂದು – ನ್ಯಾಯ ವಿಚಾರಣೆಮಾಡಿ ನನ್ನ ವಿರೋಧಿಯಿಂದ ನನ್ನನ್ನು ಬಿಡಿಸು ಎಂದು ಹೇಳಿಕೊಳ್ಳುತ್ತಿದ್ದಳು. ಅವನು ಸ್ವಲ್ಪ ಕಾಲ ಮನಸ್ಸುಕೊಡಲಿಲ್ಲ. ಆ ಮೇಲೆ ಅವನು – ನಾನು ದೇವರಿಗೆ ಹೆದರುವವನಲ್ಲ, ಮನುಷ್ಯರನ್ನು ಲಕ್ಷ್ಯಮಾಡುವವನಲ್ಲ; ಆದರೂ ಈ ವಿಧವೆ ನನ್ನನ್ನು ಕಾಡುತ್ತಾ ಬರುವದರಿಂದ ಈಕೆಯ ನ್ಯಾಯವನ್ನು ವಿಚಾರಿಸಿ ತೀರ್ಪುಮಾಡುವೆನು; ಇಲ್ಲವಾದರೆ ಈಕೆಯು ಬಂದು ಬಂದು ಕಡೆಗೆ ನನ್ನನ್ನು ದಣಿಸಾಳು ಎಂದು ತನ್ನೊಳಗೆ ಅಂದುಕೊಂಡನು. ಸ್ವಾಮಿಯು ಈ ಸಾಮ್ಯವನ್ನು ಹೇಳಿದ ಮೇಲೆ – ಅನ್ಯಾಯಗಾರನಾದ ಈ ನ್ಯಾಯಾಧಿಪತಿ ಅಂದುಕೊಂಡದ್ದನ್ನು ಆಲೋಚಿಸಿಕೊಳ್ಳಿರಿ. ದೇವರಾದುಕೊಂಡವರು ಆತನಿಗೆ ಹಗಲು ರಾತ್ರಿ ಮೊರೆಯಿಡುವಲ್ಲಿ ಆತನು ಅವರ ವಿಷಯದಲ್ಲಿ ತಡಮಾಡಿದರೂ ಅವರ ನ್ಯಾಯವನ್ನು ತೀರಿಸದೆ ಇರುವನೇ? ಅವರಿಗೆ ಬೇಗ ನ್ಯಾಯ ತೀರಿಸುವನೆಂದು ನಿಮಗೆ ಹೇಳುತ್ತೇನೆ. ಹೀಗಿದ್ದರೂ ಮನುಷ್ಯಕುಮಾರನು ಬಂದಾಗ ಭೂಮಿಯ ಮೇಲೆ ನಂಬಿಕೆಯನ್ನು ಕಾಣುವನೋ? ಅಂದನು.

ಯೇಸುವಿನ ಅನುಯಾಯಿಗಳಾದ ನಾವು ಯಾವಾಗಲೂ ಪ್ರಾರ್ಥಿಸಬೇಕು ಮತ್ತು ಹೃದಯವನ್ನು ಕಳೆದುಕೊಳ್ಳಬಾರದು. ರಾತ್ರಿ – ಹಗಲೂ ಪ್ರತಿಯೊಂದೂ ಸ್ಥಳದಲ್ಲೂ ಪ್ರಾರ್ಥನೆ ಮಾಡುವ ಭಾಗ್ಯವನ್ನು ನಮಗೆ ನೀಡಲಾಗಿದೆ. ನಮ್ಮ ಪ್ರಾರ್ಥನೆಗಳು ದೇವರನ್ನು ಬೇಗನೆ ಕಾರ್ಯ ಮಾಡುವಂತೆ ಪ್ರೇರೇಪಿಸುತ್ತವೆ.

ಮತ್ತಾಯ 6:5–15:

> ಮತ್ತು ನೀವು ಪ್ರಾರ್ಥನೆ ಮಾಡುವಾಗ ಕಪಟಿಗಳ ಹಾಗೆ ಮಾಡಬೇಡಿರಿ. ಆನರು ನೋಡಬೇಕೆಂದು ಅವರು ಸಭಾಮಂದಿರಗಳಲ್ಲಿಯೂ ಬೀದಿಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆ ಮಾಡುವುದಕ್ಕೆ ಇಷ್ಟಪಡುತ್ತಾರೆ ಅವರು ತಮಗೆ ಬರತಕ್ಕ ಪ್ರತಿಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನ ಪ್ರಾರ್ಥನೆ ಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು; ಅಂತರಂಗದಲ್ಲಿ ನಡೆಯುವುದನ್ನು ನೋಡು – ವ ನಿನ್ನ ತಂದೆಯು ನಿನಗೇ ಫಲಕೊಡುವನು. ಆದರೆ ಪ್ರಾರ್ಥನೆ ಮಾಡುವಾಗ ಅಜ್ಞಾನಿಗಳ ಹಾಗೆ ಹೇಳಿದ್ದನ್ನೆ ಸುಮ್ಮಸುಮ್ಮನೇ ಹೇಳಬೇಡ; ಅವರು ಬಹಳ

ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ನೆನೆಸುತ್ತಾರೆ. ಆದದರಿಂದ ನೀವು ಅವರ ಹಾಗೆ ಆಗಬೇಡಿರಿ. ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವುದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯವೆಂಬುದು ಆತನಿಗೆ ತಿಳಿದಿದೆ. ಆದದರಿಂದ ನೀವು ಹೀಗೆ ಪ್ರಾರ್ಥನೆ ಮಾಡತಕ್ಕದ್ದು – ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧ – ವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕ – ದಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು. ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸುವಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸ – ದೇ ಕೇಡಿನಿಂದ ನಮ್ಮನ್ನು ತಪ್ಪಿಸು. ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ಸಹ ನಿಮ್ಮ ತಪ್ಪುಗಳನ್ನೂ ಕ್ಷಮಿಸುವನು. ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೇ ಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವುದಿಲ್ಲ.

ಈ ಕಥೆಯನ್ನು ಓದಿದ ನಂತರ, ಕಥೆಯನ್ನು ಈ ವಿಧಾನಗಳಲ್ಲಿ ಒಂದನ್ನು ಪರಿಶೀಲಿಸಿ:

- ನೆನಪಿನಿಂದ ಕಥೆಯನ್ನು ಹೇಳಿ.
- ಕಥೆಯ ಬಗ್ಗೆ ಮಾತನಾಡಿರಿ. ಏನಾಯಿತು?
- ಕಥೆಯನ್ನು ಮತ್ತೆ ಹೇಳಿ ಅಥವಾ ಓದಿ.
- ಕಥೆಯನ್ನು ವಿವರಿಸುವ ನಾಟಕವನ್ನು ಮಾಡಿ.
- ಕಥೆಯನ್ನು ವಿವರಿಸುವ ಚಿತ್ರಗಳನ್ನು ಬರೆಯಿರಿ.

ಕಥೆಯನ್ನು ಪರಿಶೀಲಿಸಿದ ನಂತರ, ಕಥೆಯನ್ನು ಆಧರಿಸಿ ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿರಿ:

- ದೇವರ ಬಗ್ಗೆ ನಾವು ಏನ್ನು ಕಲಿತೆವು?
- ಮನುಷ್ಯರ ಬಗ್ಗೆ ನಾವು ಏನನ್ನು ಕಲಿತೆವು?
- ನಾವು ಏನು ಮಾಡಬಾರದು?
- ನಾವು ಏನು ಮಾಡಬೇಕು?

ಈ ಸಾಮಾನ್ಯ ಪ್ರಶ್ನೆಗಳನ್ನು ಚರ್ಚಿಸಿದ ನಂತರ, ಈ ನಿರ್ದಿಷ್ಟ ಕಥೆಗೆ ಕೆಳಗಿನವುಗಳು ಸಹಾಯಕವಾಗಬಹುದು.

ಕೆಳಗಿನವುಗಳನ್ನು ಚರ್ಚಿಸಿ:

- ಪ್ರಾರ್ಥನೆ ಎಂದರೆ ಏನು?

ಪ್ರಾರ್ಥನೆ ಎಂದರೆ ದೇವರ ಸಂಗಡ ಮಾತನಾಡುವುದು.

- ನಾವು ಯಾಕೆ ಪ್ರಾರ್ಥಿಸಬೇಕು?
  ದೇವರು ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ ಮತ್ತು ನಮ್ಮ ಪ್ರಾರ್ಥನೆಗಳು ಪರಿಣಾಮಕಾರಿಯಾಗಿದೆ. ಸಾಧ್ಯವಾದರೆ, ಯಾಕೋಬ 5:13–18 ಅನ್ನು ಓದಿರಿ.

- ನಾವು ಹೇಗೆ ಪ್ರಾರ್ಥಿಸಬೇಕು?
  ನಾವು ದೇವರೊಂದಿಗೆ ಸರಳವಾಗಿ ಮಾತನಾಡುವ ಮೂಲಕ ಪ್ರಾರ್ಥಿಸುತ್ತೇವೆ. ನಾವು ಯಾವುದೇ ಸಮಯದಲ್ಲಿ ಅಥವಾ ಸ್ಥಳದಲ್ಲಿ ದೇವರೊಂದಿಗೆ ಮಾತನ್ನಾಡಬಹುದು. ನಮ್ಮ ಹೃದಯದ ಅಗತ್ಯತೆಗಳು, ಕ್ಷಮೆ, ರಕ್ಷಣೆ, ನ್ಯಾಯ, ಮಾರ್ಗದರ್ಶನ ಮತ್ತು ಇತರ ಬಯಕೆಗಳಿಗಾಗಿ ಪ್ರಾರ್ಥಿಸಬಹುದು.

## ಅಭ್ಯಾಸ ಮಾಡಿ

ಒಬ್ಬರಿಗೊಬ್ಬರು ಪ್ರಾರ್ಥಿಸುವುದನ್ನು ಆಭ್ಯಾಸ ಮಾಡಿರಿ.

# ಭಾಗ ಮೂರು
# ಮುಂದಾಗಿ ನೋಡುವುದು

## ಬದ್ಧತೆ

ಯೇಸುವಿನ ಕಥೆ ಮತ್ತು ಆಜ್ಞೆಯಿಂದ ಏನ್ನು ಪಾಲಿಸಬೇಕೆಂದು ಚರ್ಚಿಸಿ. ಮುಂದಿನ ಭೇಟಿಯ ಮೊದಲು ಪಾಲಿಸಬೇಕಾದ ಕೆಲವು ಮಾರ್ಗಗಳು:

- ಪ್ರತಿದಿನ ಪ್ರಾರ್ಥನೆಯಲ್ಲಿ ಪ್ರಾರಂಭಿಸಿ ಮತ್ತು ಕೊನೆಗೊಳಿಸಿ, ದೇವರಿಗೆ ಕೃತಜ್ಞತೆ ಸಲ್ಲಿಸಿ ಮತ್ತು ನಿಮ್ಮ ವಿನಂತಿಯನ್ನು ಆತನಿಗೆ ಅರ್ಪಿಸಿರಿ.
- (ಮತ್ತಾಯ 6:5–15) ಈ ವಾಕ್ಯಭಾಗದ ಕಥೆಯನ್ನು ಇತರೆ ಜನರಿಗೆ ಹೇಳಿರಿ.
- ಸತ್ಯವೇದವನ್ನು ಅನುದಿನವೂ ಓದಿರಿ.

# ಪ್ರಾರ್ಥನೆ

ಪ್ರಾರ್ಥನೆಯಲ್ಲಿ ಸಮಯವನ್ನು ಒಟ್ಟಿಗೆ ಅಂತ್ಯಮಾಡಿರಿ. ಎಲ್ಲರೂ ಮಾಡಿದ ಬದ್ಧತೆಗಳಿಗಾಗಿ ಪ್ರಾರ್ಥಿಸಿ.

**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ
ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible, BSI - Kannada - J.V. published by The Bible Society of India. Used by permission.
All rights reserved.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.